ಕರ್ನಾಟಕ ಸರಕಾರ
ಕಾಲೇಜು ಶಿಕ್ಷಣ ಇಲಾಖೆ
ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಕಲಬುರಗಿ
(ನ್ಯಾಕನಿಂದ "A" ಶ್ರೇಣಿಯ ಮಾನ್ಯತೆ ಪಡೆದಿದೆ)
ಸೇಡಂ ರಸ್ತೆ, ಕಲಬುರಗಿ – 585 105
Phone: 08472-245064
www.gcak.ac.in

No.GCAK/Adm/PG-Admissions/2019-20/ Date: 01.06.2019

## ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶ ಅಧಿಸೂಚನೆ

2019–20ನೇ ಶೈಕ್ಷಣಿಕ ಸಾಲಿಗಾಗಿ ಸರಕಾರಿ ಮಹಾವಿದ್ಯಾಲಯ(ಸ್ವಾಯತ್ತ), ಕಲಬುರಗಿಯ ಈ ಕೆಳಕಂಡ ಸ್ನಾತಕೋತ್ತರ ಕೋರ್ಸಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಕೋರ್ಸ | ವಿಷಯ |
|---|---|---|
| 01 | ಎಂ.ಎ. | ಕನ್ನಡ, ಇಂಗ್ಲೀಷ, ಹಿಂದಿ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ |
| 02 | ಎಂ.ಎಸ್ಸಿ | ಭೌತಶಾಸ್ತ್ರ, ಗಣಿತ,ಗಣಕವಿಜ್ಞಾನ,ಪ್ರಾಣಿಶಾಸ್ತ್ರ ಸೂಕ್ಷ್ಮಜೀವಶಾಸ್ತ್ರ |
| 03 | ಎಂ.ಕಾಂ. | – |

### ಎ. ಅರ್ಹತೆಗಳು:

**1. ಎಂ.ಎ.**

ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸ್ವಾಯತ್ತ ಕಾಲೇಜಿನಿಂದ ಸ್ನಾತಕ ಪದವಿಯಲ್ಲಿ (ಬಿ.ಎ) ನಿಗದಿತ ವಿಷಯವನ್ನು ಐಚ್ಛಿಕವಾಗಿ () ಅಧ್ಯಯನ ಮಾಡಿ, ಐಚ್ಛಿಕ ವಿಷಯದಲ್ಲಿ ಮತ್ತು ಪದವಿಯಲ್ಲಿ ಸರಾಸರಿ 50% ಅಂಕಗಳೊಂದಿಗೆ ಉತ್ತೀರ್ಣರಾಗಿರತಕ್ಕದ್ದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ವರ್ಗ–1 ರ ಅಭ್ಯರ್ಥಿಗಳು ಕನಿಷ್ಠ 45% ಅಂಕಗಳೊಂದಿಗೆ ಉತ್ತೀರ್ಣರಾಗಿರತಕ್ಕದ್ದು.

ಭಾಷಾ ವಿಷಯಗಳಾದ ಕನ್ನಡ, ಇಂಗ್ಲೀಷ ಮತ್ತು ಹಿಂದಿ ಕೋರ್ಸಗಳಿಗೆ, ಅಭ್ಯರ್ಥಿಗಳು ನಿಗದಿತ ವಿಷಯವನ್ನು ಐಚ್ಛಿಕವಾಗಿ ಅಥವಾ ಬೇಸಿಕ ತೆಗೆದುಕೊಂಡು ಓದಿದರೂ ಸಹ ಅರ್ಹರಾಗಿರುತ್ತಾರೆ. ಆದರೆ ಪ್ರವೇಶಾತಿ ಆಯ್ಕೆ ಸಂದರ್ಭದಲ್ಲಿ ಐಚ್ಛಿಕ ವಿಷಯವನ್ನು ತೆಗೆದುಕೊಂಡವರಿಗೆ ಆದ್ಯತೆ ನೀಡಲಾಗುವುದು.

**2. ಎಂ.ಎಸ್ಸಿ.**

ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸ್ವಾಯತ್ತ ಕಾಲೇಜಿನಿಂದ ಬಿ.ಎಸ್ಸಿ. ಪದವಿಯಲ್ಲಿ ನಿಗದಿತ ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಐಚ್ಛಿಕ ವಿಷಯ ಮತ್ತು

Scanned by CamScanner

ಪದವಿಯಲ್ಲಿ ಸರಾಸರಿಯಾಗಿ ಕನಿಷ್ಠ ಶೇಕಡಾ 50% ಅಂಕಗಳೊಂದಿಗೆ ಉತ್ತೀರ್ಣರಾಗಿರತಕ್ಕದ್ದು. ಆದರೆ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಕ್ಕೆ ಸೇರಿದ ವಿದ್ಯಾರ್ಥಿಗಳು ಶೇಕಡಾ 45% ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಲ್ಲಿ ಅರ್ಹರಾಗಿರುತ್ತಾರೆ.

3. **ಎಂ.ಎಸ್ಸಿ ಗಣಕವಿಜ್ಞಾನ:**

ಬಿ.ಎಸ್ಸಿ ಪದವಿಯಲ್ಲಿ ಗಣಕವಿಜ್ಞಾನ, ಮಾಹಿತಿ ವಿಜ್ಞಾನ, ಮಾಹಿತಿ ತಂತ್ರಜ್ಞಾನ ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಅಥವಾ ಬಿ.ಸಿ.ಎ. ಪದವಿಯನ್ನು ಮೇಲ್ಕಂಡ ಕನಿಷ್ಠ ಅಂಕಗಳೊಂದಿಗೆ ಉತ್ತೀರ್ಣರಾಗಿರುವವರು ಅರ್ಹರಾಗಿರುತ್ತಾರೆ.

4. **ಎಂ.ಎಸ್ಸಿ ಸೂಕ್ಷ್ಮಜೀವಶಾಸ್ತ್ರ:**

ಬಿ.ಎಸ್ಸಿ ಪದವಿಯಲ್ಲಿ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೀವರಸಾಯನಶಾಸ್ತ್ರ, ಜೈವಿಕತಂತ್ರಜ್ಞಾನ, ಪೌಷ್ಠಕತೆ ವಿಷಯಗಳ ಐಚ್ಛಿಕವಾಗಿ ತೆಗೆದುಕೊಂಡು ಮೇಲೆ ತಿಳಿಸಿದ ಕನಿಷ್ಠ ಅಂಕಗಳೊಂದಿಗೆ ಉತ್ತೀರ್ಣರಾಗಿರುವವರು ಅರ್ಹರಾಗಿರುತ್ತಾರೆ.

**ಬಿ. <u>ಆಯ್ಕೆ ವಿಧಾನ:</u>**

ಎ) ಮೇಲೆ ತಿಳಿಸಲಾದ ಎಲ್ಲಾ ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶಾತಿಯನ್ನು ಸರಕಾರಿ ಮಹಾವಿದ್ಯಾಲಯ(ಸ್ವಾಯತ್ತ) ಕಲಬುರಗಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ( ) ಯ ಮೂಲಕ ಮಾಡಲಾಗುವುದು.

ಬಿ) ಮೇಲೆ ತಿಳಿಸಲಾದ ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಸರ್ಕಾರಿ ಮಹಾವಿದ್ಯಾಲಯ ನಡೆಸುವ ಪ್ರವೇಶ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು.

ಸಿ) ಅಭ್ಯರ್ಥಿಗಳು ತಾವು ಪ್ರವೇಶ ಬಯಸುವ ಪ್ರತಿ ಸ್ನಾತಕೋತ್ತರ ಕೋರ್ಸಗಳಿಗೆ ಪ್ರತ್ಯೇಕವಾಗಿ ಅರ್ಜಿಸಲ್ಲಿಸಿ ಆಯಾ ವಿಷಯಗಳಲ್ಲಿ ಪ್ರವೇಶ ಪರೀಕ್ಷೆಯನ್ನು ಬರೆಯತಕ್ಕದ್ದು.

ಡಿ) ಸ್ನಾತಕೋತ್ತರ ಪ್ರವೇಶ ಪರೀಕ್ಷೆಯು 100 ಅಂಕಗಳ ಬಹುಆಯ್ಕೆಯ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರವೇಶ ಪರೀಕ್ಷೆಯ Negative ಅಂಕಗಳು ಒಳಗೊಂಡಿರುವುದಿಲ್ಲ.

ಇ) ಪ್ರತಿ ವಿಷಯದ ಪರೀಕ್ಷಾ ಅವಧಿಯು 2 ಗಂಟೆಗಳಾಗಿರುತ್ತದೆ.

ಎಫ) ಸಾಮಾನ್ಯ ಪ್ರವೇಶ ಪರೀಕ್ಷೆಯ ವಿಷಯವಾರು ಪಠ್ಯಕ್ರಮವನ್ನು ಸರಕಾರಿ ಮಹಾವಿದ್ಯಾಲಯದ ಅಧಿಕೃತ ಜಾಲ ತಾಣ <u>www.gcak.ac.in</u> ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು

ಜಿ) ಅಭ್ಯರ್ಥಿಯು ವಿವಿಧ ಕೊರ್ಸಗಳಿಗೆ ಮೇಲೆ ತಿಳಿಸಲಾದ ಕನಿಷ್ಠ ಅರ್ಹತೆಗನುಗುಣವಾಗಿ ಪದವಿಯಲ್ಲಿ ಗಳಿಸಿದ ಅಂಕಗಳಲ್ಲಿ ಶೇಕಡಾ 50% ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳಲ್ಲಿ ಶೇಕಡಾ 50% ರ ಆಧಾರದ ಮೇಲೆ ಸಾಮಾನ್ಯ ಅರ್ಹತೆ ಪಟ್ಟಿಯನ್ನು ತಯಾರಿಸಿ ಅದಕ್ಕನುಗುಣವಾಗಿ ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶವನ್ನು ನೀಡಲಾಗುವುದು.

Scanned by CamScanner

ಎಚ್) ಮೇಲ್ಕಂಡ ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶವನ್ನು ಕರ್ನಾಟಕ ಸರಕಾರದ ಚಾಲ್ತಿಯಲ್ಲಿರುವ ನಿಯಮಗಳಿಗನುಗುಣವಾಗಿ ಮತ್ತು ಕಾಲೇಜು ನಿಗದಿಪಡಿಸಿದ ಕೋರ್ಸವಾರು ಪ್ರವೇಶಮಿತಿಗನುಗುಣವಾಗಿ ನೀಡಲಾಗುವುದು.

ಐ) ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಕಲಬುರಗಿಯಲ್ಲಿ ನಡೆಸಲಾಗುವುದು. ಸಂಬಂಧಿತ ವೇಳಾಪಟ್ಟಿಯನ್ನು ಮಹಾವಿದ್ಯಾಲಯ ಅಧಿಕೃತ ಅಂತರ್ಜಾಲ ತಾಣ www.gcak.ac.in ದಲ್ಲಿ ಪ್ರಕಟಿಸಲಾಗುವುದು.

ಸಿ. **ಅಭ್ಯರ್ಥಿಗಳಿಗೆ ಸೂಚನೆಗಳು:**

1. ಮೇಲೆ ತಿಳಿಸಲಾದ ಸ್ನಾತಕೋತ್ತರ ಕೋರ್ಸಗಳ ಪ್ರವೇಶ ಪರೀಕ್ಷೆಗೆ ಹಾಜರಾಗಬಯಸುವ ಅಭ್ಯರ್ಥಿಗಳು ಮಹಾವಿದ್ಯಾಲಯದ ಅಧಿಕೃತ ಅಂತರ್ಜಾಲ ತಾಣಕ್ಕೆ ಭೇಟಿಕೊಟ್ಟು ಆನ್‌ಲೈನ್ ಮೂಲಕ ಅರ್ಜಿಯನ್ನು ತುಂಬುವದು.
2. ಅಭ್ಯರ್ಥಿಯು ಪ್ರವೇಶ ಪಡೆಯಲಿಚ್ಛಿಸುವ ಪ್ರತಿ ಕೋರ್ಸಗೆ ಪ್ರತ್ಯೇಕವಾಗಿ ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸತಕ್ಕದ್ದು.
3. ಅಭ್ಯರ್ಥಿಯು ಆನ್ ಲೈನ್ ಮೂಲಕ ಅರ್ಜಿಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಿ, ಅರ್ಜಿಯ ಒಂದು ಮುದ್ರಿತ ಪ್ರತಿಯನ್ನು ಸಂಬಂಧಿಸಿದ ಎಲ್ಲಾ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಕಾಲೇಜಿನ ಕಚೇರಿಗೆ ಅಂತಿಮ ದಿನಾಂಕದೊಳಗೆ ಸಲ್ಲಿಸಿದಾಗ ಮಾತ್ರ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಪೂರ್ಣವಾಗುತ್ತದೆ.
4. ವಿವಿಧ ಪ್ರವರ್ಗಗಳು, ವಿಶೇಷ ಪ್ರವರ್ಗಗಳು, ಅನುಚ್ಛೇದ(371ಜೆ) (Annexure-A) ಅಡಿಯಲ್ಲಿ ಪ್ರವೇಶ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಾಧಿಕಾರಗಳು ನೀಡುವ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಯಾವುದೇ ಕಾರಣಕ್ಕೂ ಅರ್ಜಿಸಲ್ಲಿಸಿದ ನಂತರ ಸಲ್ಲಿಸುವ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.
5. ಅಭ್ಯರ್ಥಿಗಳು ಕೋರ್ಸವಾರು ಪ್ರವೇಶ ಪತ್ರಗಳನ್ನು ಕಾಲೇಜಿನ ಅಧಿಕೃತ ಅಂತರ್ಜಾಲ ತಾಣದಿಂದ ನಿಗದಿಪಡಿಸಿದ ದಿನಾಂಕಗಳಂದು ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು.
6. ಪದವಿ ಕೋರ್ಸಗಳ ಅಂತಿಮ ಸೆಮೆಸ್ಟರ ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಗಳು ಪ್ರವೇಶ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಅಂತಹ ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟವಾದ 04 ಕೆಲಸದ ದಿನಗಳೊಳಗಾಗಿ ಮೂಲ ಅಂಕಪಟ್ಟಿ / ದೃಢೀಕೃತ ಅಂಕಪಟ್ಟಿಯ ಪ್ರತಿಯನ್ನು ಕಾಲೇಜಿನ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
7. ತಾತ್ಕಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ನಿಗದಿತ ಕೋರ್ಸಗಳಿಗೆ ಪ್ರವೇಶ ಪಡಯುವಾಗ ಪದವಿ ಕೋರ್ಸನ ಎಲ್ಲಾ ಅಂಕಪಟ್ಟಿಗಳು, ಎಸ್.ಎಸ್.ಎಲ್.ಸಿ ಅಂಕಪಟ್ಟಿ ಮತ್ತು ಸಂಬಂಧಿಸಿದ ಎಲ್ಲಾ ದಾಖಲೆಗಳ ಮೂಲಪ್ರತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
8. ಮೇಲೆ ತಿಳಿಸಿದ ಸ್ನಾತಕೋತ್ತರ ಕೋರ್ಸಗಳನ್ನು ನಡೆಸಲು ಅಗತ್ಯವಿರುವ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆಯು ಕರ್ನಾಟಕ ಸರ್ಕಾರವು ನಿಗದಿಪಡಿಸಿದ ನಿಯಮಗಳಿಗೆ ಒಳಪಟ್ಟಿರುತ್ತದೆ.

Scanned by CamScanner

9. ಕೋರ್ಸವಾರು ಮತ್ತು ವರ್ಗವಾರು ಲಭ್ಯವಿರುವ ಸೀಟುಗಳ ಸಂಖ್ಯೆ ಮತ್ತು ಕೋರ್ಸ ಶುಲ್ಕಗಳಿಗಾಗಿ ಅಭ್ಯರ್ಥಿಗಳು ಕಾಲೇಜಿನ ಅಧಿಕೃತ ಜಾಲತಾಣ www.gcak.ac.in ಭೇಟಿ ನೀಡಿ ತಿಳಿದುಕೊಳ್ಳಬಹುದು.

10. ಮೇಲ್ಕಂಡ ಕೋರ್ಸಗಳ ಪ್ರವೇಶಕ್ಕೆ ಸಂಬಂಧಿಸಿದಂತೆ, ಕಾಲದಿಂದ ಕಾಲಕ್ಕೆ ನೀಡಲಾಗುವ ಮಾಹಿತಿಗಾಗಿ ಅಭ್ಯರ್ಥಿಗಳು ಕಾಲೇಜಿನ ಅಧಿಕೃತ ಜಾಲತಾಣದ ಸಂಪರ್ಕದಲ್ಲಿರಲು ಕಡ್ಡಾಯವಾಗಿ ಸೂಚಿಸಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸುವುದು.**

| | | |
|---|---|---|
| For technical assistance | | |
| **For other assistance** | | |
| Faculty of Arts | Dr.Suresh Jadhav | 9448651948 |
| Faculty of Social Sciences | Dr.Malleshappa Kumbar | 9448890863 |
| Faculty of Science | Dr.Mahantesh M. N. | 9972082283 |
| Faculty of Commerce | Dr.Kallinath Patil | 9741094346 |

**ಡಿ. ಸಾಮಾನ್ಯ ಪ್ರವೇಶ ಪರೀಕ್ಷೆಯ ಶುಲ್ಕ:**

| | |
|---|---|
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ₹ 250/- ಪ್ರತಿ ವಿಷಯಕ್ಕೆ |
| ಪ್ರವರ್ಗ–2ಎ, 2ಬಿ, 3ಎ, 3ಬಿ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ | ₹ 400/- ಪ್ರತಿ ವಿಷಯಕ್ಕೆ |

**ಇ. ಪ್ರಮುಖ ದಿನಾಂಕಗಳು:**

| | |
|---|---|
| ಆನ್‌ಲೈನ್ ಅರ್ಜಿಸಲ್ಲಿಕೆ ಪ್ರಾರಂಭವಾಗುವ ದಿನಾಂಕ | 03.06.2019 |
| ಆನ್‌ಲೈನ್ ಅರ್ಜಿಸಲ್ಲಿಸಲು ಕೊನೆಯ ದಿನಾಂಕ | 20.06.2019 |
| ಸಂಬಂಧಿಸಿದ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಅರ್ಜಿಯ ಮುದ್ರಿತ ಪ್ರತಿ ಕಾಲೇಜಿನ ಕಚೇರಿಗೆ ಸಲ್ಲಿಸಲು ಅಂತಿಮ ದಿನಾಂಕ | 24.06.2019 |
| ಸಾಮಾನ್ಯ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಡೌನ್ ಲೋಡ ಮಾಡಿಕೊಳ್ಳುವ ದಿನಾಂಕ | 28.06.2019 ರಿಂದ |
| ಸಾಮಾನ್ಯ ಪ್ರವೇಶ ಪರೀಕ್ಷೆಗಳು ನಡೆಯುವ ತಾತ್ಕಾಲಿಕ ದಿನಾಂಕಗಳು | 03.07.2019 ರಿಂದ 06.07.2019 |

ಪ್ರಾಂಶುಪಾಲರು
PRINCIPAL
Govt. College (Autonom
Kalaburagi-585 105

Scanned by CamScanner